ಒಡ್ಡಿಕೊಳ್ಳುತ್ತ, 'ನಿಮ್ಮ ಡೀನ್ ಅಂದರೆ ನಮ್ಮ ಪ್ರೇಕ್ಷಾ ಅಲ್ಲವಾ?' ಎಂದು ಕೇಳಿದೆ.

'ಯೆಸ್ಸರ್, ನಿಮ್ಮದೇ ಪ್ರೇಕ್ಷಾ ಮ್ಯಾಮ್...' ಅಂತನ್ನುತ್ತ ಸಲಿಲೆ ಸೊಟ್ಟಗೆ ನಕ್ಕಳು. ಈ ಮಾತು ಹೇಳಿದಾಗ 'ನಿಮ್ಮದೇ' ಎಂಬುದಕ್ಕೆ ಆಕೆ ಇನ್ನಿರದ ಒತ್ತುಕೊಟ್ಟು ಹೇಳಿದ ವ್ಯಂಗ್ಯ ನನ್ನನ್ನು ತಟ್ಟದಿರಲಿಲ್ಲ. ಇಷ್ಟಾಗಿ, ಈ ಶಾಲೆಯ ಪ್ರಿನ್ಸಿಪಲ್ ಸುಖೇನ್ ಮವ್ಳಿ ಎಂಬಾತನೂ, ಡೀನ್ ಪ್ರೇಕ್ಷಾ ಜಯಿಸ್ವಾಲಳೆಂಬ ಇನ್ನೊಬ್ಬಳೂ ಕಾಲೇಜು–ದಿನಗಳಲ್ಲಿ ನನ್ನ ಸಹಪಾಠಿಗಳು. ಐದಾರು ವರ್ಷಗಳ ಕಾಲ ಇದೇ ಡಿಸೈನು ಕಲಿಕೆಗೆಂದು ನನ್ನೊಡನೆ ಮಣ್ಣು ಹೊತ್ತವರು. ಹಾಗಾಗಿ, ಇವೊತ್ತಿಗೂ ನಮ್ಮ ನಡುವೊಂದು ಹಳಸಲುಗೆಯ ಎಳೆಯುಂಟು. ಏಕವಚನ ಹಿಡಿದಾಡುವ ಬಳಕೆಯೂ ಉಂಟು. 'ವಾರೆವ್ವಾ... ಏನು? ಇಬ್ಬರೂ ಸೇರಿಕೊಂಡು ಈ ಶಾಲೋದ್ಧಾರಕ್ಕೆ ನಿಂತಿರೋ?' ಎಂದು ನಾನು ಆಗಿಂದಾಗ ಇವರನ್ನು ಕುರಿತು ತಮಾಷೆ ಮಾಡುವುದಿದೆ. ಡಿಸೈನೆಂಬುದರ ಕಿಂಚಿತ್ತನ್ನೂ ಸರಿಯಾಗಿ ನಂಬಲೊಲ್ಲದ ಇವರಿಬ್ಬರೂ–ಇಡೀ ದೇಶಮಟ್ಟದಲ್ಲಿ ಹೆಸರಾಗಿರುವ ಈ ವಿನ್ಯಾಸಶಾಲೆಯನ್ನು ನಡೆಸುತ್ತಾರೆಂಬುದೂ ಕೌತುಕದ ಸಂಗತಿಯೇನೇ... ಹುಹ್ಞ್... ವಿಡಂಬನೆ ತಾನೇ? ಅಸಲಿನಲ್ಲಿ, ವಿನ್ಯಾಸವೆಂಬುದರ 'ಸರಿ'ಧ್ಯಾನ ಜರುಗುವುದು ಅದರ ಪ್ರ್ಯಾಕ್ಟೀಸಿನಲ್ಲಿಯೇ ಹೊರತು, ಕಲಿಸುವ ಶಾಲೆಗಳಲ್ಲಿ ಅಲ್ಲವಷ್ಟೆ? ಧ್ಯಾನ ಸಿದ್ಧಿಸುವುದು ಧ್ಯಾನಿಸುವುದರಲ್ಲಿಯೇ ವಿನಃ ಆ ಕುರಿತು ಆಡುವುದರಲ್ಲಿಯೆಲ್ಲಿ?

'ಏನಾಯಿತು ಗೊತ್ತಾ, ಪರಿಧಿ ಸರ್?' ಈ ಅಶ್ಲೀಲಚಿತ್ರದ ಬಗ್ಗೆ ಪ್ರೇಕ್ಷಾ ಹೇಳಿದ್ದೇನೆಂದು ನಾನು ಕುತೂಹಲಿಸಿ ಕೇಳಲಿಕ್ಕೆ ಮುನ್ನವೇ ಸಲಿಲೆ ಆ ಕುರಿತು ಆಡಿದಳು. 'ಅವರಿಗೆ ಈ ಚಿತ್ರ ಅಸಭ್ಯ ಅನಿಸಲಿಲ್ಲವಂತೆ. ವ್ವಾಟ್ಟೆ ಜೋಕ್... ಇದು ಹುತ್ತದಿಂದ ಹೊರಬರುತಿರೋ ಹಾವಂತೆ–ಪರಿಧಿ ಸರ್...'

ಕಿಸಿಯುವ ಸರದಿ ನನ್ನದಾಯಿತು. ಅಶ್ಲೀಲವೆಂಬುದನ್ನು ಬಿಟ್ಟರೆ ಚೆನ್ನಾಗಿ ತನ್ನ ತಾನು ತೆರೆದು ತೋರಿರುವ ಈ ಚಿತ್ರವು ಹೀಗೂ ಅಪಾರ್ಥ ಹುಟ್ಟಿಸಲುಂಟೇ? 'ವ್ವಾಟ್ಟ್? ವಾಟ್ಸ್ ರಾಂಗ್ ವಿತ್ ಹರ್?' ಹುಬ್ಬೇರಿಸಿ ಕೇಳಿದೆ.

'ಎಕ್ಸ್ಯಾಕ್ಟ್‌ಲೀ, ಪರಿಧಿ ಸರ್... ವಾಟ್ ಈಸ್ನ್ಟ್ ರಾಂಗ್ ವಿತ್ ಹರ್? ಇದಕ್ಕೆ ಕ್ಯೂಟಾದ ಹಾವೂಂತಂದರೆ ಏನು ಹೇಳೋದು–ಹೇಳಿ... ಷಕ್ಸ್...' ಸಲಿಲೆ ವಾರೆಗಣ್ಣಿನಲ್ಲಿ ಆ ಭಿತ್ತಿಚಿತ್ರಿಕೆಯನ್ನು ನೋಡಿ, ಮತ್ತೂ ಒಮ್ಮೆ ನಗುನಗುತ್ತಲೇ ಹೇಸಿಕೊಂಡಳು.

ಯೋನಿಯೊಳಗೆ ಪುಷ್ಕಳವಾಗಿ ವೀರ್ಯ ಹನಿಸುತ್ತಿರುವ ಈ ಶಿಶ್ನಚಿತ್ರಿಕೆಯು ಪ್ರೇಕ್ಷಾಳಿಗೆ ಯಾವ ಕೋನದಲ್ಲಿ ಹಾವಾಗಿ ಕಂಡೀತೆಂದು ಯೋಚಿಸುತ್ತ, 'ಸೂಟ್ಸ್ ಗುಡ್ ಫಾರ್ ಹರ್....' ಅಂತಂದೆ. 'ನಾವು ಒಟ್ಟಿಗೆ ಓದುತ್ತಿದ್ದಾಗ ಅಮೀಬಾ ಗೀಚಿ ಮರ ಅಂತ ನಂಬಿಸಿದೋಳಿವಳು–ಗೊತ್ತಾ?'

ನನ್ನ ಮಾತಿನಲ್ಲಿದ್ದ ವಿಷಾದವನ್ನೇಕೋ ಅವಗಣಿಸಿದ ಸಲಿಲೆ, 'ಇದನ್ನ ಯಾರು ಬರೆದಿದ್ದೂಂತ ನನಗೆ ಗೊತ್ತು, ಪರಿಧಿ ಸರ್...' ಅಂತಂದಳು.

'ವ್ವಾಟ್?!'

'ಏನು ಗೊತ್ತಾ, ಸರ್... ನಿನ್ನೆ ಸ್ಕೂಲ್ ಮುಗಿದ ಮೇಲೆ ನಾನೇ ಹೌಸ್ ಕೀಪಿಂಗಿನವರಿಗೆ ಕರೆಸಿ ಇದನ್ನ ಪೂರ್ತಿ ಎರೇಸ್ ಮಾಡಿಸಿದ್ದೆ. ಲುಕ್ ವಾಟ್ ಹ್ಯಾಸ್ ಹ್ಯಾಪ್ಪನ್ಡ್. ಇವೊತ್ತು ಮತ್ತೆ ಬರೆದಿದ್ದಾನೆ...' ಈ ಮಾತಿನೊಡನೆ ಸಲಿಲೆಯ ಮೈಯಿ ಧುಮುಗುಡುತ್ತ ಅದುರಿತು. ಮೋರೆಯಲ್ಲಿ ಕೋಪದ ಕೆಂಪುಗ್ಗಿ ಕಂಡಿತು.

'ಆರ್ ಯು ಸೀರಿಯಸ್?' ಎಂದು ನಾನು ಕೇಳುತ್ತಿರುವಾಗಲೇ ಎಲಿವೇಟರು ಕೆಳಮಹಡಿಯಲ್ಲಿ ತೆರೆದುಕೊಂಡಿತು. ಸಲಿಲೆ ನನಗೂ ಮುನ್ನ ಹೊರಗಿನ ಕಾರಿಡಾರಿನೊಳಕ್ಕೆ ಅಡಿಯಿಟ್ಟು ನನ್ನನ್ನು ಬರಮಾಡಿಕೊಂಡು, 'ವಿಷಯ ಇಷ್ಟೇ ಅಲ್ಲ, ಪರಿಧಿ ಸರ್... ನಿಮ್ಮ ಜೊತೆ ಇನ್ನೂ ಹೇಳಿಕೊಳ್ಳೋದಿದೆ.' ಅಂತಂದಳು.

'ಹೇಳುತನೇ ಇದೀಯಲ್ಲ, ಸಲಿಲಾ...'

'ಇನ್ನೂ ವಿಷಯಕ್ಕೇ ಬಂದಿಲ್ಲ–ಸರ್...'

'ಮತ್ತೆ ಎರಡೇ ಎರಡು ನಿಮಿಷದ ಮಾತೂಂತಂದೀ...'

'ಪ್ಲೀಸ್–ಪರಿಧಿ ಸರ್... ಐ ನೀಡ್ ದಿಸ್ ಹೆಲ್ಪ್. ನೀವು ಕ್ಲ್ಯಾಸೊಳಗೆ ಮುಖ ತೋರಿಸಿಬಿಟ್ಟು ಬನ್ನಿ. ನಾನಿಲ್ಲೇ ಇರುತೀನಿ.'

ಸ ಲಿ ಲೆ ಯ

